ಕೃಷಿ ಕಾರ್ಮಿಕರಿಗೆ ಜಮೀನು

885 - ಶ್ರೀಮತಿ ಬಿ. ಟಿ.ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷಿ ಕಾರ್ಮಿಕರು ಹಲವಾರು ವರ್ಷಗಳಿಂದ ರಾಜ್ಯದಲ್ಲಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;ಹಾಗಿದ್ದರೆ ಅವರುಗಳ ಜಮೀನುಗಳನ್ನು ಸಕ್ರಮಗೊಳಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?*

ಆ) *ಅಕ್ರಮ ಜಮೀನನ್ನು ಸಕ್ರಮಗೊಳಿಸಬೇಕೆಂದು ಸರ್ಕಾರ ಪ್ರಕಟಣೆ ಹೊರಡಿಸಿದ್ದಂತಹ ಸಂದರ್ಭದಲ್ಲಿ ಬಹಳಷ್ಟು ಜನ ಅನಕ್ಷರಸ್ಥ ಕೃಷಿ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಅರ್ಜಿ ಸಲ್ಲಿಸುವ ತಿಳುವಳಿಕೆ ಇಲ್ಲದೆ, ಅರ್ಜಿ ಸಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದರೆ ಇಂತಹ ರೈತರಿಗೆ ನ್ಯಾಯ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಹೌದು. ಕರ್ನಾಟಕ ಭೂ ಕಂದಾಯ ಕಾಯದೆಗಳ 1964ರ ಕಾಲಂ 94-ಎ ಗೆ ತಿದ್ದುಪಡಿಯಂತೆ ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳ 1966ರ ಅನ್ವಯ ಅರ್ಹರಾದ ವ್ಯಕ್ತಿಗಳಿಗೆ ಜಮೀನನ್ನು ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಮತ್ತು ಇ) ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು

887 - ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಯಚೂರು ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳು ಇವೆ?*

ಆ) *ಸಹಕಾರ ಸಂಘಗಳಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಹೊಂದಿವೆ, ಮತ್ತು ಎಷ್ಟು ಜನ ಮಹಿಳೆಯರಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ನರವಾಗಿವೆ?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ದಿನಾಂಕ 31-3-1996ರ ಅಂತ್ಯಕ್ಕೆ 976 ಸಹಕಾರ ಸಂಘಗಳು ಇರುತ್ತವೆ.

ಆ) 455840 ಜನ ಫಲಾನುಭವಿಗಳನ್ನು ಹೊಂದಿವೆ ಮತ್ತು 6142 ಮಹಿಳೆಯರಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ನೆರವಾಗಿವೆ.